## ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.1187/2021

| | | |
|---|---|---|
| ಸಾಕ್ಷಿದಾರರ ಹೆಸರು | – ಮಹೇಶ್ | ಸಿಡಬ್ಲ್ಯೂ-2 |
| ತಂದೆಯ ಹೆಸರು | – ಚಿತ್ತಪ್ಪ | ಪಿಡಬ್ಲ್ಯೂ-6 |
| ವಯಸ್ಸು | – 24 ವರ್ಷ | |
| ಉದ್ಯೋಗ | – ವಿದ್ಯಾರ್ಥಿ | |
| ವಾಸ | – ಬಡಾಗೊಲ್ಲರಹಟ್ಟಿ ಗ್ರಾಮ. | |

**ದಿನಾಂಕಃ12.08.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ನನಗೆ ಚಾಸಾ.1 ರವರು ಗೊತ್ತು. ಮೃತ ಜಂಗಲಿ ಈರಪ್ಪ ಮೃತಪಟ್ಟಿದ್ದಾರಿ. ಅವರು ಬೈಕ್ ಅಪಘಾತದಲ್ಲಿ ಮೃತಪಟ್ಟಿದ್ದಾರೆ. 4 ವರ್ಷಗಳ ಹಿಂದೆ ಯಲ್ಲಕೆರೆಗೆ ಆರೋಗ್ಯ ಸರಿ ಇಲ್ಲದ ಕಾರಣ ಆಸ್ಪತ್ರೆಗೆ ಹೋಗಿದ್ದರು. ಆಸ್ಪತ್ರೆಯಿಂದ ನನ್ನ ತಾತ ನನಗೆ ಫೋನ್ ಮಾಡಿ ನನನ್ನು ಕರೆದುಕೊಂಡು ಹೋಗಿ ಎಂದು ತಿಳಿಸಿದ್ದು ನಾನು ಹೋಗುವಷ್ಟರಲ್ಲಿ ನನ್ನ ತಾತನಿಗೆ ಯಾರೋ ಒಬ್ಬ ವ್ಯಕ್ತಿ ಬೈಕ್ ನಿಂದ ಡಿಕ್ಕಿ ಪಡಿಸಿದ್ದು ನನ್ನ ತಾತ ಬಿದ್ದಿದ್ದು ಜನರು ಸೇರಿದ್ದರು. ನಂತರ ಅವರನ್ನು ಕರೆದುಕೊಂಡು ನಾನು ಯಲ್ಲದಕೆರೆ ಆಸ್ಪತ್ರೆಗೆ ಹೋಗಿರುತ್ತೇನೆ. ಯಲ್ಲದಕೆರೆ ಬಸ್ ನಿಲ್ದಾಣದ ಹತ್ತಿರ ಅಪಘಾತವಾಗಿರುತ್ತದೆ. ನನ್ನ ತಾತನ ಸೊಂಟ, ಕೈಕಾಲುಗಳಿಗೆ ಪೆಟ್ಟಾಗಿತ್ತು. ಅಪಘಾತ ಹೇಗಾಯಿತು ಎಂದು ನಾನು ವಿಚಾರಿಸಿರುವುದಿಲ್ಲ. ಚಾಸಾ.1 ರವರಿಗೆ ಫೋನ್ ಮಾಡಿ ವಿಷಯ ತಿಳಿಸಿರುತ್ತೇನೆ. ಅವರ ಮಗ ಬಂದು ಹಿರಿಯೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಸಂಭವಿಸಿದೆ ಎಂದು ನಾನು ತಿಳಿದುಕೊಂಡಿಲ್ಲ. ಈ ಬಗ್ಗೆ ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಿಲ್ಲ. ಅಪಘಾತ ಪಡಿಸಿದ ಬೈಕ್ ನಂಬರ್ ಹೇಳಲು ಬರುವುದಿಲ್ಲ. ಪೊಲೀಸರು ನನ್ನ ಮರು ಹೇಳಿಕೆ ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ದಿಃ02.10.2020 ರಂದು ಸುಮಾರು 4 ಗಂಟೆ ಸಮಯದಲ್ಲಿ ನನ್ನ ತಾತ ಯಲ್ಲದಕೆರಗೆ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿದ್ದರು ಎಂದರೆ ನಿಜ. ಸುಮಾರು ರಾತ್ರಿ 8.15 ರ ಸಮಯದಲ್ಲಿ ನನ್ನ ತಾತ ನಡೆದುಕೊಂಡುಹೋಗುತ್ತಿರುವಾಗ ಕೆ ಕೆ ಹಟ್ಟಿ ಗ್ರಾಮದ ಕಡೆಯಿಂದ ಒಂದು ಬೈಕ್ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನನ್ನ ತಾತ ಜಂಗ್ಲಿ ಈರಪ್ಪನಿಗೆ ಡಿಕ್ಕಿ ಪಡಿಸಿದ್ದರಿಂದ ನನ್ನ ತಾತ ಸ್ಥಳದಲ್ಲಿ ಕುಸಿದು ಬಿದ್ದಿದ್ದು ನಾನು ಮೋಟರ್ ಸೈಕಲನ್ನು ಪಕ್ಕಕ್ಕೆ ನಿಲ್ಲಿಸಿ ಹತ್ತಿರ ಹೋಗಿ ನೋಡಲಾಗಿ ಅವರ ಎಡಗಾಲಿಗೆ ಸೊಂಟಕ್ಕೆ ಮೈಕೈಗೆ ಪೆಟ್ಟುಗಳು ಬಿದ್ದು ರಕ್ತಗಾಯಗಳಾಗಿದ್ದು ಮೋಟರ್ ವಾಹನ ನಂ. ಎಪಿ.39 ಬಿ ಜಡ್ 4826 ರ ಚಾಲಕ ಬೈಕನು ಅಲ್ಲಿಯೇ ಬಿಟ್ಟು ಓಡಿ ಹೋಗಿದ್ದಾನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಮೇಲೆಹೇಳಿದಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಪಿ-13 ಎಂದು ಗುರುತಿಸಲಾಯಿತು. ದಿಃ25.10.2020 ರಂದು ಮೋಟರ್ ಸೈಕಲ್ ಚಾಲಕ ಗೋಪಾಲಪ್ಪ ತಂದೆ ಚಿಕ್ಕಣ್ಣ, ಜಿರಾಯ್ತಿ ಕೆಲಸ ಕೆ ಕೆ ಹಟ್ಟಿ ಗ್ರಾಮ ಹಿರಿಯೂರು ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಅವರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಮರು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಓದಿ ಹೇಳಿದಂತೆ ಆರೋಪಿಯನ್ನು ಗುರುತಿಸಿ ಮರು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮರು ಹೇಳಿಕೆ ಭಾಗವನ್ನು ನಿಪಿ-14 ಎಂದು ಗುರುತಿಸಲಾಯಿತು. ನನ್ನ ತಾತ ದಿಃ24.10.2020 ರಂದು ರಾತ್ರಿ 8.30 ಕ್ಕೆ ಮೃತ ಪಟ್ಟಿದ್ದಾರೆ ಎಂದರೆ ನಿಜ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಆರ್ ಟಿ ಎಸ್ ವಕೀಲರಿಂದ– ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ , ಹಿರಿಯೂರು